355


# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9 ಮತ್ತು 10ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560 001


ಸಂಖ್ಯೆ: ಡಾ:ಬಿಆರ್‌ಅಂಅನಿ/ಕೈತ/ಸು/2014-15/ ದಿನಾಂಕ: 20.06.2014

## ಸುತ್ತೋಲೆ

ವಿಷಯ: ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಕಡ್ಡಾಯವಾಗಿ ಪಾಲಿಸಬೇಕಾದ ನಿಯಮಗಳ ಕುರಿತು.

---

ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಮದಿಂದ ಪರಿಶಿಷ್ಟ ಜಾತಿಯ ಜನರ ಆರ್ಥಿಕ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಈ ಪೈಕಿ ಸ್ವಯಂ ಉದ್ಯೋಗ, ಉದ್ಯಮಶೀಲತಾ ಅಭಿವೃದ್ಧಿ ಯೋಜನೆ(ಐ.ಎಸ್.ಬಿ.), ಮೈಕ್ರೋ ಕ್ರೆಡಿಟ್-1 ಹಾಗೂ ಮಹಿಳಾ ಸಮೃದ್ಧಿ ಯೋಜನೆ ಹಾಗೂ ಮೈಕ್ರೋ ಕ್ರೆಡಿಟ್ ಕಿರುಸಾಲ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ನಿಗಮದ ಅಧಿಕಾರಿಗಳು/ಸಿಬ್ಬಂದಿಗಳು ಕಾರ್ಯಕ್ರಮ ಅನುಷ್ಠಾನಗೊಳಿಸುವಲ್ಲಿ ನಿಯಮಗಳನ್ನು ಸರಿಯಾದ ರೀತಿಯಲ್ಲಿ ಪಾಲಿಸದೇ ಇರುವುದುನ್ನು ಗಮನಿಸಲಾಗಿದೆ. ಈ ಯೋಜನೆಯನ್ನು ಸಮರ್ಪಕ ರೀತಿಯಲ್ಲಿ ಅನುಷ್ಠಾನಗೊಳಿಸಲು ಕೆಳಕಂಡ ಅರ್ಹತೆ/ನಿಯಮಗಳನ್ನು ಈ ದಿನದಿಂದಲೇ ಜಾರಿಗೆ ಬರುವಂತೆ ಕಡ್ಡಾಯವಾಗಿ ಪಾಲಿಸುವುದು.

**ಸ್ವಯಂ ಉದ್ಯೋಗ ಮತ್ತು ಐ.ಎಸ್.ಬಿ. ಯೋಜನೆ :-**

1. ಫಲಾನುಭವಿಗಳು ಕಡ್ಡಾಯವಾಗಿ ಆಯ್ಕೆ ಸಮಿತಿಯಲ್ಲಿ ಆಯ್ಕೆಯಾಗಿರಬೇಕು. ಯಾವುದೇ ಕಾರಣಕ್ಕೂ ಶಿಫಾರಸ್ಸು ಪತ್ರಗಳನ್ನು ಪರಿಗಣಿಸಬಾರದು
2. ನಿಗಮದ ನಿಯಮಗಳನ್ವಯ ಸೌಲಭ್ಯಕ್ಕೆ ಅರ್ಹರಿರಬೇಕು
3. ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕವೇ ಯೋಜನೆಗಳ ಅನುಷ್ಠಾನ ಮಾಡುವುದು.
4. ಬ್ಯಾಂಕಿನಿಂದ ಬಂದ ಕ್ಲೈಂಗಳಿಗೆ ಹಣ ಬಿಡುಗಡೆ ಮಾಡುವಾಗ ಕಡ್ಡಾಯವಾಗಿ ಜೇಷ್ಠತೆಯನ್ನು ಪಾಲಿಸುವುದು.
5. ಕ್ಷೇತ್ರಕ್ಕೆ ನಿಗದಿಪಡಿಸಿರುವ ಗುರಿಗನುಗುಣವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.
6. ಜಿಲ್ಲೆಯ ಒಂದು ಕ್ಷೇತ್ರದ ಗುರಿಯನ್ನು ಇನ್ನೊಂದು ಕ್ಷೇತ್ರಕ್ಕೆ ವರ್ಗಾಯಿಸುವಂತಿಲ್ಲ
7. ಒಂದೇ ಬ್ಯಾಂಕಿನಿಂದ/ಶಾಖೆಯಿಂದ ನಿಗದಿಪಡಿಸಿದ ಗುರಿ ಮೀರಿ ಬಂದ ಕ್ಲೈಂಗಳನ್ನು ಪರಿಗಣಿಸಿ ಹಣ ಬಿಡುಗಡೆ ಮಾಡುವ ಮುನ್ನ ಕೇಂದ್ರ ಕಚೇರಿಯ ಅನುಮೋದನೆ ಪಡೆಯಬೇಕು.
8. ಫಲಾನುಭವಿಗೆ ಸೌಲಭ್ಯ ಕಲ್ಪಿಸುವ ಮುನ್ನ ಚಾಲ್ತಿಯಲ್ಲಿರುವ ಜಾತಿ/ಆಧಾಯ ಪ್ರಮಾಣ ಪತ್ರಗಳನ್ನು ಪಡೆಯಬೇಕು

**ಮೈಕ್ರೋ ಕ್ರೆಡಿಟ್ ಯೋಜನೆ -1 ಹಾಗೂ ಮಹಿಳಾ ಸಮೃದ್ಧಿ ಯೋಜನೆ :-**

1. ಫಲಾನುಭವಿಯು ಆಯ್ಕೆ ಸಮಿತಿಯಲ್ಲಿ ಆಯ್ಕೆಯಾಗಿರಬೇಕು
2. ನಿಗಮದ ನಿಯಮಗಳನ್ವಯ ಸೌಲಭ್ಯಕ್ಕೆ ಅರ್ಹರಿರಬೇಕು
3. ಫಲಾನುಭವಿಯು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಖಾತೆ ಹೊಂದಿರಬೇಕು ಹಾಗೂ ಆ ಖಾತೆಗೆ RTGS ಮೂಲಕ ಸಾಲಸೌಲಭ್ಯ ಒದಗಿಸಬೇಕು.

**ಮೈಕ್ರೋ ಕ್ರೆಡಿಟ್ ಕಿರುಸಾಲ :-**

1. ಸ್ವ ಸಹಾಯ ಸಂಘಗಳು ಸಂಬಂಧಪಟ್ಟ ಇಲಾಖೆಯಿಂದ ನೋಂದಾಯಿಸಲ್ಪಟ್ಟಿರಬೇಕು ಹಾಗೂ ನೋಂದಣಿಯಾಗಿ ಕನಿಷ್ಟ ಒಂದು ವರ್ಷವಾಗಿರಬೇಕು

...2.

Scanned with CamScanner

2. ಸ್ವ ಸಹಾಯ ಸಂಘ ಹಾಗೂ ಫಲಾಪೇಕ್ಷಿ ಸದಸ್ಯರು ಶಾಸಕರ ಆಯ್ಕೆ ಸಮಿತಿಯಲಿ ಆಯ್ಕೆಯಾಗಿರಬೇಕು
3. ಸಂಘ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಖಾತೆ ತೆರೆದಿರಬೇಕು. ಖಾತೆಯು ಕನಿಷ್ಠ ಒಂದು ವರ್ಷ ಚಾಲ್ತಿಯಲ್ಲಿರಬೇಕು
4. ಸಂಘದ ಎಲ್ಲಾ ಅರ್ಹ ಸದಸ್ಯರಿಗೆ ಒಂದೇ ಬಾರಿಗೆ ಸೌಲಭ್ಯ ಕಲ್ಪಿಸಬೇಕು. ಯಾವುದೇ ಕಾರಣಕ್ಕೂ ವಿಭಜನೆ ಮಾಡುವಂತಿಲ್ಲ.
5. ಸಂಘದ ಸದಸ್ಯರು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಖಾತೆ ತೆರೆದಿರಬೇಕು.
6. ಸಂಘದ ಸದಸ್ಯರುಗಳ ಖಾತೆಗೆ ಸೌಲಭ್ಯದ ಮೊತ್ತವನ್ನು RTGS ಮೂಲಕ ಜಮಾ ಮಾಡಬೇಕು. ಯಾವುದೇ ಕಾರಣಕ್ಕೂ ಸಂಘದ ಹೆಸರಿಗೆ RTGS ಮೂಲಕ ಅಥವಾ ಚೆಕ್ ವಿತರಿಸಬಾರದು.
7. ಸಂಘದ ಎಲ್ಲಾ ಪದಾಧಿಕಾರಿಗಳು ಹಾಗೂ ಸೌಲಭ್ಯ ಪಡೆಯುತ್ತಿರುವ ಸದಸ್ಯರು, ಜಿಲ್ಲಾ ವ್ಯವಸ್ಥಾಪಕರು ಹಾಗೂ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳನ್ನೊಳಗೊಂಡು ಗ್ರೂಪ್ ಫೋಟೋ ಇರಬೇಕು.
8. ಸಂಘದ ಲೆಕ್ಕ ಪತ್ರಗಳು ಆಡಿಟ್ ಆಗಿರುವ ಬಗ್ಗೆ ಸಂಬಂಧಿಸಿದ ಸರ್ಟಿಫೈಡ್ ಆಡಿಟ್ ಪ್ರತಿ ನೀಡಬೇಕು.
9. ಈ ಯೋಜನೆಯ ಅನುಷ್ಠಾನವನ್ನು ಆಯಾ ವಿಭಾಗದ ಉಪ ಪ್ರಧಾನ ವ್ಯವಸ್ಥಾಪಕರು ಅನುಮೋದಿಸಬೇಕು.
10. ಜಿಲ್ಲಾ ಮಟ್ಟದಲ್ಲಿ ಒಂದು ಮಂಜೂರಾತಿ ಆದೇಶದ ಅವಧಿ 60 ದಿನಗಳಿಗೆ ಮಾತ್ರ ಸಿಂಧುವಾಗಿರುತ್ತದೆ. ಈ ಅವಧಿ ಮುಗಿದ ನಂತರ ಯೋಜನೆಯ ಸೌಲಭ್ಯ ನೀಡಲು ಕಡ್ಡಾಯವಾಗಿ ಕೇಂದ್ರ ಕಚೇರಿಗೆ ಪ್ರಸ್ತಾವನೆ ಕಳುಹಿಸಿ ಮರು ಮಂಜೂರಾತಿ ಪಡೆದು ಫಲಾನುಭವಿಗಳಿಗೆ ಸೌಲಭ್ಯ ನೀಡುವುದು
11. ಪ್ರಸಕ್ತ ಸಾಲಿನ ಮಂಜೂರಾತಿಯನ್ನು ಹೊರತುಪಡಿಸಿ ಹಿಂದಿನ ಸಾಲಿನ ಪ್ರಸ್ತಾವನೆಗಳನ್ನು ಕೇಂದ್ರ ಕಚೇರಿ ಅನುಮೋದನೆ ಪಡೆದು ನಂತರ ಮಂಜೂರಾತಿ ಆದೇಶ ಹೊರಡಿಸಬೇಕು.

ಮೇಲ್ಕಂಡ ಎಲ್ಲಾ ನಿಯಮಗಳನ್ನು ಪಾಲಿಸಿ ಸೌಲಭ್ಯ ಒದಗಿಸುವುದು. ಯಾವುದೇ ನಿಯಮಗಳನ್ನು ಪಾಲಿಸದೇ ಸೌಲಭ್ಯ ಒದಗಿಸಿ ಕರ್ತವ್ಯಲೋಪ ಎಸಗಿದಲ್ಲಿ ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರು ಹಾಗೂ ಕಚೇರಿ ಅಧೀಕ್ಷಕರು ನೇರವಾಗಿ ಜವಾಬ್ದಾರರಾಗುತ್ತಾರೆ ಹಾಗೂ ನಿಗಮದ ನಿಯಮಗಳನ್ವಯ ಶಿಸ್ತು ಕ್ರಮಕ್ಕೆ ಒಳಪಡುತ್ತಾರೆ.

26/06/2014

ವ್ಯವಸ್ಥಾಪಕ ನಿರ್ದೇಶಕರು

ಪ್ರತಿಯನ್ನು:

1. ಎಲ್ಲಾ ಪ್ರಧಾನ ವ್ಯವಸ್ಥಾಪಕರುಗಳಿಗೆ,
2. ಎಲ್ಲಾ ಉಪ ಪ್ರಧಾನ ವ್ಯವಸ್ಥಾಪಕರುಗಳಿಗೆ
3. ಎಲ್ಲಾ ಜಿಲ್ಲಾ ವ್ಯವಸ್ಥಾಪಕರುಗಳಿಗೆ
4. ಕಚೇರಿ ಪ್ರತಿ

Scanned with CamScanner